# “ಶಿವಮೊಗ್ಗ ಜಿಲ್ಲೆ”

# ಸಂಕ್ಷಿಪ್ತ

# ಪಕ್ಷಿ ನೋಟ

# ಶಿವಮೊಗ್ಗ ಜಿಲ್ಲೆ ಒಂದು ಪಕ್ಷಿ ನೋಟ

ಪಶ್ಚಿಮಘಟ್ಟಗಳಿಂದ ಆವೃತವಾದ ಮಲೆನಾಡಿನ ಹೆಬ್ಬಾಗಿಲು ಶಿವಮೊಗ್ಗ ಜಿಲ್ಲೆ. ಜಿಲ್ಲೆಯು ಸಮುದ್ರಮಟ್ಟದಿಂದ 640 ಮೀ. ಎತ್ತರ ಪ್ರದೇಶದಲ್ಲಿದ್ದು, ಅಕ್ಷಾಂಶವು 13.27 ಮತ್ತು 14.39 ಉತ್ತರ ಹಾಗೂ ರೇಖಾಂಶ 74.37 ಮತ್ತು 75.52 ಪೂರ್ವದಲ್ಲಿ ಅಸ್ಥಿತ್ವದಲ್ಲಿದೆ. ಪೂರ್ವದಿಂದ ಪಶ್ಚಿಮಕ್ಕೆ 152.9 ಕಿ.ಮೀ.ಗಳು ಹಾಗೂ ಉತ್ತರದಿಂದ ದಕ್ಷಿಣಕ್ಕೆ 128.8 ಕಿ.ಮೀ. ಉದ್ದವಾಗಿದ್ದು, ಚಿಕ್ಕಮಗಳೂರು, ಉಡುಪಿ, ಕಾರವಾರ, ಹಾವೇರಿ, ಮತ್ತು ದಾವಣಗೆರೆ ಜಿಲ್ಲೆಗಳು ಗಡಿ ಜಿಲ್ಲೆಗಳಾಗಿವೆ.

ಶಿವಮೊಗ್ಗ ಜಿಲ್ಲೆಯು 07(ಏಳು) ಕಂದಾಯ ತಾಲ್ಲೂಕುಗಳು, 37 ಹೋಬಳಿಗಳು, 271 ಗ್ರಾಮಪಂಚಾಯತಿಗಳು, 9 ನಗರ/ಪಟ್ಟಣಗಳು, 1443 ಜನವಸತಿ ಇರುವ ಗ್ರಾಮಗಳು ಹಾಗೂ 87 ಜನವಸತಿ ಇಲ್ಲದ ಗ್ರಾಮಗಳನ್ನು ಒಳಗೊಂಡಿದೆ. ಜಿಲ್ಲೆಯಲ್ಲಿ 07 ವಿಧಾನ ಸಭಾ ಕ್ಷೇತ್ರ 03 ವಿಧಾನ ಪರಿಷತ್ ಕ್ಷೇತ್ರ, ಮತ್ತು 01 (ಒಬ್ಬ) ಸಂಸದರನ್ನು ಹಾಗೂ 31 ಜಿಲ್ಲಾಪಂಚಾಯತ್ ಸದಸ್ಯರಿಂದ ಕೂಡಿದೆ. ಜಿಲ್ಲೆಯಲ್ಲಿ 2001 ರಲ್ಲಿ 1642545 ಜನಸಂಖ್ಯೆ ಹೊಂದಿದ್ದು, 2011 ರಲ್ಲಿ 1752753ಕ್ಕೆ ಏರಿಕೆಯಾಗಿದ್ದು ಇದರಲ್ಲಿ 877415 ಪುರುಷ ಹಾಗೂ 875338 ಮಹಿಳೆಯರನ್ನು ಒಳಗೊಂಡಿದೆ. 2011ರ ಜನಗಣತಿ ಪ್ರಕಾರ ಸಾಕ್ಷರತೆಯ ಪ್ರಮಾಣ ಶೇ.80.05 ಆಗಿದೆ. 2011–12ರ ಸ್ಥಿರ ಬೆಲೆಯಲ್ಲಿ 2015–16ರಲ್ಲಿ ಒಟ್ಟು ಜಿಲ್ಲಾ ಆಂತರಿಕ ಉತ್ಪನ್ನವು 20075 ಕೋಟಿ ರೂ. ಗಳಾಗಿರುತ್ತದೆ. ಹಾಗೂ ತಲಾ ಆದಾಯವು 120372 ರೂ. ಗಳಾಗಿದೆ.

ಜಿಲ್ಲೆಯಲ್ಲಿ ಮುಖ್ಯವಾಗಿ ಶರಾವತಿ, ತುಂಗ, ಕುಮದ್ವತಿ, ನದಿಗಳ ಉಗಮಸ್ಥಾನವಾಗಿದ್ದು, ತುಂಗಾ ನದಿ ದಂಡೆಯ ಮೇಲೆ ಶಿವಮೊಗ್ಗ ನಗರವಿದೆ. ಹಾಗೂ ಭದ್ರಾ ನದಿ ದಂಡೆಯ ಮೇಲೆ ಉಕ್ಕಿನ ನಗರ ಭದ್ರಾವತಿ ನಗರ ಇರುವುದನ್ನು ಕಾಣಬಹುದಾಗಿದೆ. ಶಿವಮೊಗ್ಗ ನಾಮದ ಮೂಲವು **ಸಿಹಿ ಮೊಗ್ಗೆ** ಎಂದು ಕೆಲವು ಸಾಹಿತಿಗಳಿಂದ ಉಲ್ಲೇಖಿತವಾದರೆ, ಕೆಲವು ಸಾಹಿತಿಗಳು **ಶಿವನ ಮುಖ** ವಾಗಿತ್ತು ಎಂದು ಉಲ್ಲೇಖಿಸಿದ್ದಾರೆ. ತುಂಗ ಮತ್ತು ಭದ್ರಾ ನದಿಗಳು **ಕೂಡಲಿ** ಎಂಬಲ್ಲಿ ಕೂಡಿ ಧಾರ್ಮಿಕ ಸ್ಥಳವಾಗಿ ಮಾರ್ಪಾಡಾಗಿದೆ.

ಶಿವಮೊಗ್ಗ ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳಾದ ಜೋಗ ಜಲಪಾತವು ಶರಾವತಿ ನದಿ ನೀರಿನಿಂದ ಉಗಮವಾಗಿದ್ದು, ನದಿಗೆ ಲಿಂಗನಮಕ್ಕಿ ಅಣೇಕಟ್ಟು ನಿರ್ಮಿಸಿ ರಾಜ್ಯದಲ್ಲಿ ಶೇ.26 ರಷ್ಟು ವಿದ್ಯತ್ ಉತ್ಪಾದನೆ ಮಾಡಿ ಕೊಡುಗೆಯಾಗಿ ನೀಡಿದೆ. ಜೋಗಜಲಪಾತವು ರಾಜ, ರಾಣಿ, ರೋರರ್ ಮತ್ತು ರಾಕೇಟ್ ಗಳಾಗಿ ಹರಿದು 830 ಅಡಿ ಆಳಕ್ಕೆ ದುಮುಕುವುದನ್ನು ಕಾಣುವುದು ಮನೋಹರವಾಗಿರುತ್ತದೆ. ಇದರೊಂದಿಗೆ ದಬ್ಬೆ ಜಲಪಾತ ಸಾಗರ ತಾಲ್ಲೂಕು, ಹಿಡ್ಲುಮನೆ ಜಲಪಾತವು ಹೊಸನಗರ ತಾಲ್ಲೂಕಿನಲ್ಲಿದೆ. ಪರ್ವತಾರೋಹಣಕ್ಕೆ ಹೆಸರುವಾಸಿಯಾದ ಕೊಡಚಾದ್ರಿ, ಕುಂದಾದ್ರಿ ಮತ್ತು ಕವಲೆದುರ್ಗ ಬೆಟ್ಟಗಳು, ಮಂಡಗದ್ದೆ ಹಾಗೂ ಗುಡವಿ ಪಕ್ಷಿದಾಮಗಳು, ಆನೆಗಳನ್ನು ಪಳಗಿಸಲು ಸಕ್ರೆ ಬೈಲು ಗ್ರಾಮವು ಜಿಲ್ಲೆಯಲ್ಲಿ ಪ್ರವಾಸಿ ತಾಣಗಳಾಗಿವೆ.

ಧಾರ್ಮಿಕ ಸ್ಥಳಗಳಾದ ಕೂಡಲಿಯಲ್ಲಿ ಶೃಂಗೇರಿಯ ಮೂಲ ಶಾರದಾಂಬೆಯ ಮೂರ್ತಿಯನ್ನು ಕೂಡಲಿ ಮಠದಲ್ಲಿದ್ದು ಪ್ರಸಿದ್ದ ಧಾರ್ಮಿಕ ಸ್ಥಳವಾಗಿದೆ. ಅಕ್ಕಮಹಾದೇವಿಯವರು ಜನಿಸಿದ ಶಿಕಾರಿಪುರ

ತಾಲ್ಲೂಕಿನ ಬಳ್ಳಿಗಾವಿ, ಶಿವಮೊಗ್ಗದ ಕೋಟೆ ರಾಮಾಂಜನೇಯ ದೇವಸ್ಥಾನ, ಭದ್ರಾವತಿ ನಗರದಲ್ಲಿ ಹೊಯ್ಸಳರ ಕಾಲದಲ್ಲಿ ನಿರ್ಮಿತವಾದ ಲಕ್ಷ್ಮಿನರಸಿಂಹ ಸ್ವಾಮಿ ದೇವಸ್ಥಾನ, ಸಾಗರದ ಮಾರಿಕಾಂಬ ದೇವಸ್ಥಾನ ಹಾಗೂ ಗಣಪತಿ ದೇವಸ್ಥಾನಗಳನ್ನು ಹಾಗೂ ದೇಶದಲ್ಲೆ ಏಕೈಕ ಸಂಸ್ಕೃತ ಭಾಷೆ ಮಾತನಾಡುವ ಮತ್ತೂರು ಗ್ರಾಮ ಪ್ರಸಿದ್ದ ಧಾರ್ಮಿಕ ಸ್ಥಳಗಳಾಗಿವೆ.

ಜಿಲ್ಲೆಯು ಸಾಹಿತ್ಯ ಕ್ಷೇತ್ರದಲ್ಲಿ ಉನ್ನತ ಸ್ಥಾನದಲ್ಲಿದ್ದು ತೀರ್ಥಹಳ್ಳಿ ತಾಲ್ಲೂಕಿನ **ಕೆ.ವಿ.ಪುಟ್ಟಪ್ಪ** (ಕಾವ್ಯನಾಮ **ಕುವೆಂಪು**)ರವರಿಗೆ **1962**ರಲ್ಲಿ **"ಶ್ರೀ ರಾಮಾಯಣ ದರ್ಶನಂ"** ಕೃತಿಗೆ ಹಾಗೂ ಅದೇ ತಾಲ್ಲೂಕಿನ **ಯು.ಆರ್. ಅನಂತ ಮೂರ್ತಿ ಯವರ ಕನ್ನಡ ಸಾಹಿತ್ಯದ ಸಮಗ್ರ ಅದ್ಯಾಯನಕ್ಕೆ 1994ರಲ್ಲಿ ಜ್ಞಾನಪೀಠ ಪ್ರಶಸ್ತಿ**ಗೆ ಪಾತ್ರರಾಗಿದ್ದಾರೆ. ಹಾಗೂ **ಕೆ.ವಿ.ಪುಟ್ಟಪ್ಪ ಮತ್ತು ಜಿ.ಎಸ್. ಶಿವರುದ್ರಪ್ಪರವರು ರಾಜ್ಯದ ಮೂವರು ರಾಷ್ಟ್ರಕವಿ**ಗಳಲ್ಲಿ ಇಬ್ಬರು **ರಾಷ್ಟ್ರಕವಿ**ಗಳು ನಮ್ಮ ಜಿಲ್ಲೆಯವರಾಗಿದ್ದಾರೆ.

ಶಿವಮೊಗ್ಗ ಜಿಲ್ಲೆಯು ಕೃಷಿಯಲ್ಲಿ ಭತ್ತದ ಕಣಜವಾಗಿದ್ದು, ಅಡಿಕೆಯು ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ಶೂನ್ಯ ಕೃಷಿ ಸಾಧಕ ದೆವಂಗಿ ಪ್ರಫುಲ್ಲಚಂದ್ರ ಸತತ 30 ವರ್ಷಗಳ ಕಾಲ ಕೂಳೆ ಕಬ್ಬು ಬೆಳೆದು ಕೃಷಿಯಲ್ಲಿ ಸಾಧನೆ ಮಾಡಿದ್ದಾರೆ.

ಭದ್ರಾವತಿ ನಗರದಲ್ಲಿ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಸಾವಿರಾರು ನಾಗರೀಕರಿಗೆ ಉದ್ಯೋಗ ನೀಡಿದೆ. ಹಾಗೂ ಸಾಗರದಲ್ಲಿ ನಿರ್ಮಾಣವಾಗುವ ಗುಡಿ ಕೈಗಾರಿಕೆಯ ವಸ್ತುಗಳು ದೇಶದಲ್ಲಿ ಹೆಸರುವಾಸಿಯಾಗಿವೆ.

ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ ಪಲಿತಾಂಶವು 2015–16ನೇ ಸಾಲಿನಲ್ಲಿ ಶೇ. 77.57 ಗಳಿಸಿದ್ದು, 2016–17ರಲ್ಲಿ ಶೇ 69.37ಕ್ಕೆ ಪಲಿತಾಂಶ ಬಂದಿದ್ದು ರಾಜ್ಯಮಟ್ಟದಲ್ಲಿ 22ನೇ ಸ್ಥಾನದಿಂದ 17ನೇ ಸ್ಥಾನಕ್ಕೆ ಏರಿಕೆಯಾಗಿದೆ..

# ಶಿವಮೊಗ್ಗ ಶೈಕ್ಷಣಿಕ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಕ್ಷಿಪ್ತ ವಿವರ

## 1)ಉಪನಿರ್ದೇಶಕರ ಕಚೇರಿಯ ಸಿಬ್ಬಂದಿ ವಿವರ:–

| ಅನಂ | ಹುದ್ದೆಯ ವಿವರ | ಮಂಜೂರು | ಕಾರ್ಯನಿರ್ವಹಿಸುತ್ತಿರುವ | ಖಾಲಿ |
|---|---|---|---|---|
| 1 | ಉಪನಿರ್ದೇಶಕರು(ಆಡಳಿತ) | 1 | 1 | 0 |
| 2 | ಶಿಕ್ಷಣಾಧಿಕಾರಿಗಳು | 2 | 2 | 0 |
| 3 | ಡಿವೈಪಿಸಿ ಎಸ್.ಎಸ್.ಎ | 1 | 1 | 0 |
| 4 | ಡಿವೈಪಿಸಿ ಆರ್.ಎಂ.ಎಸ್.ಎ | 1 | 1 | 0 |
| 5 | ಶಿಕ್ಷಣಾಧಿಕಾರಿಗಳು (ಮ.ಉ.ಯೋ) | 1 | 1 | 0 |
| 6 | ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು | 1 | 0 | 1 |
| 6 | ವಿಷಯ ಪರಿವೀಕ್ಷಕರು | 5 | 3 | 2 |
| 7 | ಎಪಿಸಿ | 2 | 2 | 0 |
| 8 | ವೃತ್ತಿ ವಿಷಯ ಪರಿವೀಕ್ಷಕರು | 1 | 0 | 1 |
| 9 | ಪತ್ರಾಂಕಿತ ಸಹಾಯಕರು | 1 | 1 | 0 |
| 10 | ವ್ಯವಸ್ಥಾಪಕರು | 0 | 0 | 0 |
| 11 | ಅಧೀಕ್ಷಕರ | 3 | 3 | 0 |
| 12 | ಲೆಕ್ಕ ಅಧೀಕ್ಷಕರು | 2 | 2 | 0 |
| 13 | ಸಾಂಖ್ಯಿಕ ಅಧಿಕಾರಿಗಳು | 1 | 1 | 0 |
| 14 | ಪ್ರ.ದ.ಸ | 12 | 12 | 0 |
| 15 | ಶೀಘ್ರಲಿಪಿಗಾರರು | 1 | 1 | 0 |
| 16 | ದ್ವಿ.ದ.ಸ | 7 | 7 | 0 |
| 17 | ಬೆರಳಚ್ಚುಗಾರರು | 2 | 2 | 0 |
| 18 | ವಾಹನ ಚಾಲಕರು | 1 | 1 | 0 |
| 19 | ಡಿ ದರ್ಜೆ ನೌಕರರು | 7 | 6 | 1 |
| | ಒಟ್ಟು | 52 | 47 | 5 |

## 2) ಶಾಲೆಗಳ ವಿವರ:–

| ಕ್ರ.ಸಂ. | ಶಾಲೆಗಳ ವಿಧ | ಪ್ರಾಥಮಿಕ | ಪ್ರೌಢ | ಒಟ್ಟು |
|---|---|---|---|---|
| 1 | ಸರ್ಕಾರಿ | 1862 | 164 | 2026 |
| 2 | ಸಮಾಜ ಕಲ್ಯಾಣ | 22 | 17 | 39 |
| 3 | ಸ್ಥಳಿಯ ಸಂಸ್ಥೆ | 0 | 0 | 0 |
| 4 | ಅನುದಾನಿತ | 103 | 148 | 251 |
| 5 | ಅನುದಾನ ರಹಿತ | 343 | 150 | 493 |
| 6 | ಕೇಂದ್ರೀಯ | 2 | 2 | 4 |
| | ಒಟ್ಟು | 2332 | 481 | 2813 |

**3) ಮಕ್ಕಳ ವಿವರ (ಎಸ್.ಟಿ.ಎಸ್):-**

| ಕ್ರ.ಸಂ. | ತರಗತಿಗಳು | ಮಕ್ಕಳ ದಾಖಲಾತಿ | ಹಾಜರಾತಿ | ಶೇ. ಹಾಜರಾತಿ |
|---|---|---|---|---|
| 1 | 1 ರಿಂದ 5 | 132465 | 128120 | 96.72 |
| 2 | 6 ರಿಂದ 8 | 79361 | 75488 | 95.12 |
| 3 | 9 ರಿಂದ 10 | 51411 | 50558 | 98.34 |

**4) ಶಿಕ್ಷಕರ ಹುದ್ದೆಗಳ ಮಂಜೂರು, ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಹುದ್ದೆಗಳ ವಿವರ:-**

| ಕ್ರ.ಸಂ. | ವಿವರ | ಮಂಜೂರಾದ | ಕಾರ್ಯನಿರ್ವಹಿಸುತ್ತಿರುವವರು | ಖಾಲಿ |
|---|---|---|---|---|
| 1 | ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು | 7181 | 6844 | 337 |
| 2 | ಸರ್ಕಾರಿ ಪ್ರೌಡ ಶಾಲಾ ಶಿಕ್ಷಕರು | 1764 | 1734 | 30 |
| | ಒಟ್ಟು | 8945 | 8578 | 367 |

**5) 2017-18 ನೇ ಸಾಲಿನಲ್ಲಿ ಸರಕಾರಿ ಪ್ರಾಥಮಿಕ ಮತ್ತು ಪ್ರೌಡ ಶಾಲೆಗಳಲ್ಲಿ ಅತಿಥಿ ಶಿಕ್ಷಕರ ನೇಮಕಾತಿ:-**

1. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ 337 ಹುದ್ದೆಗಳಲ್ಲಿ 292 ಅತಿಥಿ ಶಿಕ್ಷಕರ ನೇಮಕಾತಿ ಮಾಡಲಾಗಿದೆ. ಹಾಗೂ 14 ರಿಜರ್ವ ಶಿಕ್ಷಕರನ್ನು ನೇಮಿಸಲಾಗಿದೆ.
2. ಸರ್ಕಾರಿ ಪ್ರಡಶಾಲೆಗಳಲ್ಲಿ ಖಾಲಿ ಇರುವ 30 ಹುದ್ದೆಗಳಲ್ಲಿ 20 ಅತಿಥಿ ಶಿಕ್ಷಕರ ನೇಮಕಾತಿ ಮಾಡಲಾಗಿದೆ.

**6). 2017-18ನೇ ಸಾಲಿನಲ್ಲಿ ಪದವಿಧರ ಪ್ರಾಥಮಿಕ ಶಾಲಾ ಶಿಕ್ಷಕರ (ಎಜಿಟಿ) 147 ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಕ್ರಮಕೈಗೊಳ್ಳಲಾಗಿದೆ.**

**7) ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಫಲಿತಾಂಶ ವಿವರ:-**

| ಕ್ರ.ಸಂ. | ವರ್ಷ | ಪರೀಕ್ಷೆಗೆ ಕುಳಿತವರು | ಉತ್ತೀರ್ಣರಾದವರು | ಶೇ. ವಾರು | ರಾಜ್ಯ ಮಟ್ಟದ ರ್‍ಯಾಂಕ |
|---|---|---|---|---|---|
| 1 | 2015-16 | 23050 | 17880 | 77.57 | 22 |
| 2 | 2016-17 | 25787 | 17889 | 69.37 | 15 |